T P no 1001/15-16

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

ಸಂಖ್ಯೆ:ವಾತೆಜಂಆ(ಜಾ)/ಸಿಬ್ಬಂದಿ-1/ವಾ/2015-16

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಛೇರಿ
(ಜಾಗೃತಿ) ವಾಣಿಜ್ಯ ತೆರಿಗೆ ಕಾರ್ಯಾಲಯ-2.
3ನೇ ಮಹಡಿ, 80 ಅಡಿರಸ್ತೆ ರಾಜೇಂದ್ರ ನಗರ,
ಕೋರಮಂಗಲ, ಬೆಂಗಳೂರು-560 047.
ದೂ:080-25704962 ದಿನಾಂಕ:19.12.2015.

**ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ**

ವಿಷಯ: ಈ ವಿಭಾಗದಲ್ಲಿರುವ ನಿರುಪಯುಕ್ತ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ (ಕೇಂದ್ರ) ಕೋರಮಂಗಲ ಬೆಂಗಳೂರು ಇವರ ತಪಾಸಣಾ ವರದಿ ದಿ: 06.08.2015 ಮತ್ತು 21.11.2014.

2) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರ ಪತ್ರ ಸಂ.ವಿಹೆಚ್‌ಟಿ.ಸಿಆರ್.12/2015-16, ದಿ: 06.10.2015.

** ** **

ಸಾರ್ವಜನಿಕ ಮಾಹಿತಿಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಉಲ್ಲೇಖ (1) ಮತ್ತು (2)ರ ಆದೇಶದಂತೆ ದಿನಾಂಕ: 30.12.2015 ರಂದು ಮದ್ಯಾಹ್ನ 3.30 ಗಂಟೆಗೆ ಈ ಕಛೇರಿಯ ಈ ಕೆಳಕಂಡ ವಾಹನಗಳು ನಿರಪಯುಕ್ತವಾಗಿರುವ ಕಾರಣ, ಸಂಬಂಧಿಸಿದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ) ಇವರಿಂದ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1 | ಬಹಿರಂಗ ಹರಾಜು ದಿನಾಂಕ | 30.12.2015 |
| 2 | ಹರಾಜು ಮಾಡುವ ಸ್ಥಳ | ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ವಿ.ಟಿ.ಕೆ-2, ಕೋರಮಂಗಲ, ಬೆಂಗಳೂರು-47. |

| ಕ್ರ.ಸಂ. | ವಾಹನದ ಹೆಸರು | ವಾಹನ ಸಂಖ್ಯೆ | ತಯಾರಿಕೆ ವರ್ಷ | ಇಂಧನ | ಹರಾಜು ಮಾಡಲು ನಿಗದಿಪಡಿಸಿದ ಮೊತ್ತ |
|---|---|---|---|---|---|
| 1 | ಮಹೇಂದ್ರ & ಮಹೇಂದ್ರ ಮಾರ್ಷಲ್ | ಕೆಎ 04 ಜಿ 114 | 2001 | ಡೀಸೆಲ್ | 54,000-00 |
| 2 | ಟಾಟಾ ಸುಮೋ | ಕೆಎ 01 ಜಿ 4247 | 2005 | ಡೀಸೆಲ್ | 72,000-00 |
| 3 | ಟಾಟಾ ಸುಮೋ | ಕೆಎ 04 ಜಿ 58 | 2000 | ಡೀಸೆಲ್ | 42,500-00<br>ಪ್ರತಿ ಕೆ.ಜಿ 25-00 (1700 ಕೆಜಿ) |
| 4 | ಟಾಟಾ ಸುಮೋ | ಕೆಎ 02 ಜಿ 0033 | 2000 | ಡೀಸೆಲ್ | 42,500-00<br>ಪ್ರತಿ ಕೆ.ಜಿ 25-00 (1700 ಕೆಜಿ) |

ನಿಬಂಧನೆಗಳು:

1. ಮೇಲೆ ತಿಳಿಸಿರುವ ನಿರುಪಯುಕ್ತ ವಾಹನಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು ಇವರ ಸಮ್ಮುಖದಲ್ಲಿ ಅಥವಾ ಅವರು ನೇಮಿಸಿದ ಅಧಿಕಾರಿಗಳ ಸಮ್ಮುಖದಲ್ಲಿ ನಡೆಸಲಾಗುವುದು.
2. ವಾಹನವನ್ನು ಎಲ್ಲಿ ಹೇಗಿದೆಯೋ ಹಾಗೆ ಬಹಿರಂಗ ಹರಾಜು ನಡೆಸಲಾಗುವುದು.
3. ಈ ಹರಾಜಿನಲ್ಲಿ ಪಾಲ್ಗೊಳ್ಳಬಯಸುವವರು ದಿ:28.12.2015 ರಂದು ಯಾವ ವಾಹನದ ಸಂಬಂಧ ಹರಾಜಿನಲ್ಲಿ ಪಾಲ್ಗೊಳ್ಳುವವರು ಸದರಿ ವಾಹನದ ಹರಾಜು ಮಾಡಲು ನಿಗದಿಪಡಿಸಿದ ಕನಿಷ್ಠ ಮೌಲ್ಯದ ಶೇ.10ರಷ್ಟು ಹಣವನ್ನು ಠೇವಣಿ ಮಾಡಿ ರಸೀತಿ ಪಡೆಯತಕ್ಕದ್ದು. ಠೇವಣಿ ಪಾವತಿ ಮಾಡುವ ದಿನದಂದು ಗುರುತಿನ ಚೀಟಿಯನ್ನು ತರತಕ್ಕದ್ದು ಹಾಗೂ ಸದರಿ ಗುರುತಿನ ಚೀಟಿಯ ನಕಲನ್ನು ಸಲ್ಲಿಸುವುದು. ಠೇವಣಿಯು ಯಾರ ಹೆಸರಿನಲ್ಲಿ ಇರುವುದೋ ಅವರು ಮಾತ್ರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ಇರುತ್ತದೆ. ಬೇರೆಯವರಿಗೆ ಅವಕಾಶ ಇರುವುದಿಲ್ಲ. ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.
4. ವಾಹನವನ್ನು ಸಂಬಂಧಿಸಿದ ಅಧಿಕಾರಿಗಳಿಂದ ಅನುಮೋದನೆ ಸಿಕ್ಕ ನಂತರ 15 ದಿನಗಳೊಳಗಾಗಿ ಪೂರ್ತಿ ಹಣವನ್ನು ಪಾವತಿ ಮಾಡಿ ನಂತರ ಸ್ವಂತ ಖರ್ಚಿನಲ್ಲಿ ಯಥಾಸ್ಥಿತಿಯಲ್ಲಿ ಹಾಲಿ ಇರುವ ಜಾಗದಿಂದ ಸಾಗಿಸಿಕೊಳ್ಳತಕ್ಕದ್ದು.
5. ವಾಹನವನ್ನು ಪರೀಕ್ಷಿಸಲು ಈ ಕಛೇರಿಯಲ್ಲಿ ಕೆಲಸದ ದಿನಗಳಲ್ಲಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ಪರಿಶೀಲಿಸಬಹುದು.
6. ಹರಾಜಿನಲ್ಲಿ ಹಣ ಕಟ್ಟಿ ಯಶಸ್ವಿ ಆಗದವರಿಗೆ ಕಟ್ಟಿದ ಹಣವನ್ನು ಕೂಡಲೇ ಹಿಂತಿರುಗಿಸಲಾಗುವುದು.
7. ಬಹಿರಂಗ ಹರಾಜು ಮುಗಿದ ಮೇಲೆ ಅತೀ ಹೆಚ್ಚು ಬಿಡ್ಡುದಾರರು ಕೂಡಲೇ ಮಾರಾಟದ ಮೊತ್ತ ಹಾಗೂ ತೆರಿಗೆಗಳು ಸೇರಿದಂತೆ ಶೇ.25 ಭಾಗ ಹಣವನ್ನು ಪಾವತಿ ಮಾಡದೇ ಹೋದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
8. ಉಳಿದ ಶೇ.75 ಭಾಗ ಹರಾಜಿನ ಹಣವನ್ನು ವಾಣಿಜ್ಯ ತೆರಿಗೆ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರಿಂದ ಒಪ್ಪಿಗೆ ಪತ್ರ ದೊರೆತ ದಿನಾಂಕದಿಂದ 15 ದಿನಗಳೊಳಗಾಗಿ ಪಾವತಿಸಿ ನಂತರ ತಮ್ಮ ಸ್ವಂತ ಖರ್ಚಿನಲ್ಲಿ ವಾಹನವನ್ನು ಹಾಲಿ ಇರುವ ಜಾಗದಿಂದ ಯಥಾ ಸ್ಥಿತಿಯಲ್ಲಿ ಸಾಗಿಸಿಕೊಳ್ಳತಕ್ಕದ್ದು.
9. ಹರಾಜಿನಲ್ಲಿ ವಿಲೇವಾರಿಯಾದ ವಾಹನವನ್ನು ನಿಗಧಿತ ಅವಧಿಯೊಳಗೆ ಪೂರ್ತಿ ಹಣ ಕಟ್ಟಿ ಸ್ವಾಧೀನಕ್ಕೆ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಪ್ರತಿ ದಿನಕ್ಕೆ ರೂ. 50-00 ನೆಲ ಬಾಡಿಗೆ ವಿಧಿಸಲಾಗುವುದು ಮತ್ತು ತಿಂಗಳ ಒಳಗಾಗಿ ಪೂರ್ತಿ ಹಣ ಕಟ್ಟದಿದ್ದರೆ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಂಡು ವಾಹನವನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.
10. ಇಲಾಖಾ ಸಿಬ್ಬಂದಿಯವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ.
11. ಬಹಿರಂಗ ಹರಾಜಿನಲ್ಲಿ ವಾದ ವಿವಾದಗಳಿಗೆ ಅವಕಾಶವಿಲ್ಲ. ಯಾವುದೇ ತಕರಾರುಗಳಿಗೆ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು ಇವರ ತೀರ್ಮಾನವೇ ಅಂತಿಮವಾದುದು.
12. ಯಾವುದೇ ಸಂದರ್ಭದಲ್ಲಿಯು ಮಾರಾಟದ ಹರಾಜನ್ನು ಅಂಗೀಕರಿಸುವ, ತಿರಸ್ಕರಿಸುವ, ಮುಂದೂಡುವ, ರದ್ದುಪಡಿಸುವ ಎಲ್ಲಾ ಅಧಿಕಾರ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು ಇವರಿಗೆ ಸಂಬಂಧಪಟ್ಟಿರುತ್ತದೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಜಾಗೃತಿ) ಬೆಂಗಳೂರು.

ಪ್ರತಿಗಳು:

1) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು, ಡಿವಿಓ-1,2,3,4,5 ಮತ್ತು 6 ಬೆಂಗಳೂರು, ವಾ.ತೆ.ಅ.ಆ (ಜಾರಿ) ಬೆಂಗಳೂರು. ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
3) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಕೇಂದ್ರ) ಬೆಂಗಳೂರು ಇವರಿಗೆ ಮಾಹಿತಿಗಾಗಿ.
4) ಸಾರ್ವಜನಿಕ ಮಾಹಿತಿಗಾಗಿ ಸೂಚನಾ ಫಲಕಕ್ಕೆ
5) ಇಲಾಖಾ ವೆಬ್‌ಸೈಟ್‌ನಲ್ಲಿ ಸದರಿ ಪತ್ರವನ್ನು ಹಾಕಲು, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಗಣಕ ಕೇಂದ್ರ, ಬೆಂಗಳೂರು ಇವರಿಗೆ ಕಳುಹಿಸಲಾಗಿದೆ.
6) ಕಛೇರಿ ಕಡತಕೆ.